## <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

## <u>ಸಿ.ಸಿ.ಸಂಖ್ಯೆ :72/2025</u>

<u>ಪಿರ್ಯಾದಿ</u> : ರಾಜ್ಯ, ಪರವಾಗಿ ಬಣಕಲ್ ಪೊಲೀಸ್ ಠಾಣೆ,
ಮೂಡಿಗೆರೆ.

ವಿರುದ್ಧ

<u>ಆರೋಪಿ</u> : ವಿನೋದ್ ಕುಮಾರ್ ಆರ್., ವಯಸ್ಸು ಸುಮಾರು 35 ವರ್ಷ,
ಬಿನ್ ದಿಃ ರಾಜಣ್ಣ, ವೃತ್ತಿಃ ಮೆಸ್ಕಾಂ ಇಲಾಖೆಯಲ್ಲಿ ಡ್ರೈವರ್,
ವಾಸಃ ಹಾಲೇನಹಳ್ಳಿ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.

### <u>ಆಪಾದನೆಯ ಸಾರಾಂಶ.</u>

ಶ್ರೀಮತಿ ಸುರಕ್ಷ ಕೆ.ಕೆ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೇ:-

ದಿನಾಂಕ 24.05.2024 ರಂದು ಮಧ್ಯಾಹ್ನ 3.20 ರ ಸಮಯದಲ್ಲಿ ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯ ದೇವರ ಮನೆ ಕ್ರಾಸ್ ಬಳಿ ಎನ್.ಹೆಚ್.-73 ಟಾರು ರಸ್ತೆಯಲ್ಲಿ ಆರೋಪಿಯಾದ ನೀವು ಬಣಕಲ್ ಕಡೆಯಿಂದ ಕೊಟ್ಟಿಗೆಹಾರ ಕಡೆಗೆ ಮೆಸ್ಕಾಂ ಇಲಾಖೆಗೆ ಸೇರಿದ ವಾಹನ ನೋಂದಣಿ ಸಂಖ್ಯೆ: ಕೆಎ-18-ಸಿ-3646 ನೇ ಲಾರಿಯನ್ನು ಅತೀವೇಗ, ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **279** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**2.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು, ಚಾಸಾ-18 ಶಿವಲೀಲ ರವರ ಗಂಡನಾದ ಪ್ರಭಾಕರ ರವರು ಕೊಟ್ಟಿಗೆಹಾರ ಕಡೆಯಿಂದ ಬಣಕಲ್ ಕಡೆಗೆ ರಸ್ತೆಯ ಎಡಭಾಗದಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದ ವಾಹನ ನೋಂದಣಿ ಸಂಖ್ಯೆ: ಕೆಎ-16-ಎಂ-5731 ನೇ ಮಾರುತಿ ಓಮಿನಿ ವ್ಯಾನ್ ನ ಮುಂಭಾಗಕ್ಕೆ ಡಿಕ್ಕಿ ಹೊಡೆಸಿದ ಪರಿಣಾಮ ಮಾರುತಿ ಓಮಿನಿ ವ್ಯಾನ್ ಸಂಪೂರ್ಣ ಜಖಂಗೊಂಡು ರಸ್ತೆಯ ಮೇಲೆ ಬಿದ್ದು, ಹಿಂದಕ್ಕೆ ಉರುಳಿಕೊಂಡು ಹೋಗಿ, ಸದರಿ ಮಾರುತಿ ಓಮಿನಿ ವ್ಯಾನ್ ಹಿಂದೆ ಚಾಸಾ-1 ನಾಗರಾಜಯ್ಯ ರವರು ಚಾಲನೆ ಮಾಡಿಕೊಂಡು ಬರುತ್ತಿದ್ದ ವಾಹನ ನೋಂದಣಿ ಸಂಖ್ಯೆ: ಕೆಎ-16-ಎಂ-6260 ನೇ ಮಾರುತಿ ಆಲ್ಟೋ ಕಾರಿನ ಎಡಭಾಗದ

ಬಾಡಿಗೆ ಮಾರುತಿ ಓಮಿನಿ ಡಿಕ್ಕಿ ಹೊಡೆದಿದ್ದರಿಂದ, ಮಾರುತಿ ಆಲ್ಟೋ ಕಾರು ಕೂಡ ಜಖಂಗೊಂಡು, ಈ ಅಪಘಾತದಿಂದ ಮಾರುತಿ ಓಮಿನಿ ವ್ಯಾನ್ ಚಾಲಕನಾದ ಪ್ರಭಾಕರ, ಸದರಿ ಮಾರುತಿ ವ್ಯಾನ್ ನಲ್ಲಿ ಪ್ರಯಾಣಿಸುತ್ತಿದ್ದ ಪ್ರಭಾಕರ ರವರ ತಂದೆ ಹಂಪಯ್ಯ, ತಾಯಿ ಶ್ರೀಮತಿ ಪ್ರೇಮ ಮತ್ತು ಮಂಜಯ್ಯ ಎಂಬುವರುಗಳಿಗೆ ತಲೆಗೆ ಮೈ ಕೈ ಕಾಲುಗಳಿಗೆ ತೀವ್ರ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಈ ರೀತ್ಯಾ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ **304(ಎ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**3.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಡಿಕ್ಕಿಪಡಿಸಿದ ಪರಿಣಾಮ, ಓಮಿನಿ ವ್ಯಾನ್ ನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-18 ಲೀಲಾ ಯಾನೆ ಶಿವಲೀಲ, ಇವರ ಮಕ್ಕಳಾದ ಚಾಸಾ-19 ಪ್ರತಿಭಾ ಯಾನೆ ಪ್ರತೀಕ್ಷ, ಚಾಸಾ-20 ಮಲ್ಲಿಕಾರ್ಜುನ ಮತ್ತು ಚಾಸಾ-21 ಉಮೇಶ ರವರುಗಳಿಗೆ ಹಾಗೂ ಮಾರುತಿ ಆಲ್ಟೋ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-22 ನಂದೀಶ ಹಾಗೂ ಚಾಸಾ-23 ಶ್ರೀಮತಿ ಅಕ್ಕಮ್ಮ ರವರಿಗೆ ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **338** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

**4.** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸದರಿ ವಾಹನವನ್ನು ನಿರ್ಲಕ್ಷ್ಯತನ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಡಿಕ್ಕಿಪಡಿಸಿದ ಪರಿಣಾಮ, ಓಮಿನಿ ವ್ಯಾನ್ ನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-18 ಲೀಲಾ ಯಾನೆ ಶಿವಲೀಲ, ಇವರ ಮಕ್ಕಳಾದ ಚಾಸಾ-19 ಪ್ರತಿಭಾ ಯಾನೆ ಪ್ರತೀಕ್ಷ, ಚಾಸಾ-20 ಮಲ್ಲಿಕಾರ್ಜುನ ಮತ್ತು ಚಾಸಾ-21 ಉಮೇಶ ರವರುಗಳಿಗೆ ಹಾಗೂ ಮಾರುತಿ ಆಲ್ಟೋ ಕಾರಿನ ಚಾಲಕನಾದ ಚಾಸಾ-1 ನಾಗರಾಜಯ್ಯ ಮತ್ತು ಸದರಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಚಾಸಾ-22 ನಂದೀಶ ಹಾಗೂ ಚಾಸಾ-23 ಶ್ರೀಮತಿ ಅಕ್ಕಮ್ಮ ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ **337** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರ: 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:

(ಆರೋಪಿಗೆ ದಿನಾಂಕ 03.06.2025 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ಸಹಿ/-

ಮೂಡಿಗೆರೆ
ದಿನಾಂಕ: 03.06.2025.

ಹೆಚ್ಚುವರಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.